ಬದುಕಿ ಬಂದಿದ್ದೀನಿ! ಅಳಬೇಡ..." ಎಂದು ಧೈರ್ಯ ಹೇಳಿದರು.

ಆದರೆ ತಮ್ಮ ಮಾತು ಅವರಿಗೆ ಕೇಳಿಸಲೇ ಇಲ್ಲ ಎನ್ನಿಸಿತು ದೇವರಾಜುಗೆ!

"ನಿಮ್ಮ ಬಂಧುಗಳಲ್ಲಿ ಯಾರನ್ನು ಕರೆಸಬೇಕು... ನಮಗೆ ಹೇಳಿ. ಕಂಪೆನಿ ವತಿಯಿಂದ ನಾವು ಮಾಡ್ತೀವಿ..."

"ಆ ಕೆಲಸ ನಾನು ಮಾಡ್ತೀನಿ... ನೀವು ಬಾಡಿ ತರೋದಕ್ಕೆ ಸಹಾಯ ಮಾಡಿದರೆ ಸಾಕು... ಮತ್ತೆ... ನನ್ನ ತಮ್ಮನ ಫ್ಯಾಮಿಲಿಗೆ ಸಹಾಯ ಮಾಡಬೇಕು."

ಆನಂದಣ್ಣ ಹೇಳಿದ್ದು ದೇವರಾಜುಗೆ ಅಚ್ಚರಿ.

ತಾನು ಇವರಿಗೆ ಕಾಣಿಸುತ್ತಿಲ್ಲವೆ? ತನ್ನ ಮಾತು ಇವರಿಗೆ ಕೇಳಿಸುತ್ತಿಲ್ಲವೆ? ತಾನಿಲ್ಲಿರುವಂತೆಯೇ ಇವರೆಲ್ಲಾ ಸಾವಿನ ಬಗೆಗೆ ಮಾತಾಡುತ್ತಿದ್ದಾರಲ್ಲ? ಅಂದರೆ ತನಗೇನಾಗಿದೆ?

ದೇವರಾಜು ಪತ್ನಿಯ ಬಳಿ ಹೋಗಿ ಅವಳ ಭುಜ ಅಲುಗಿಸಿದರು.

"ಜಾನಕಿ ನೋಡು, ನಾನು ಜೀವಂತ ಬಂದಿದ್ದೀನಿ, ಸತ್ತಿಲ್ಲ..."

ಆದರೆ ಆಕೆಯನ್ನು ಮುಟ್ಟಲಾಗಲಿಲ್ಲ! ಆಕೆಗೆ ತನ್ನ ಸ್ಪರ್ಶದ ಅನುಭವವಾಗಿಲ್ಲ ಎನ್ನುವುದು ಅರಿವಾಯಿತು! ಕೆಲ ಕ್ಷಣಗಳಲ್ಲಿ ತನಗೆ ದೇಹವೇ ಇಲ್ಲದಿರುವುದು ಗೊತ್ತಾಯಿತು! ತಾನು ಬದುಕಿಲ್ಲ... ಸತ್ತಿರುವೆ ಎನ್ನುವುದು ಅರಿವಾಗಿ ಸಂಕಟವಾಯಿತು! ದುಃಖ ಉಮ್ಮಳಿಸಿತು. ಬಿಕ್ಕಿಬಿಕ್ಕಿ ಅತ್ತರು ದೇವರಾಜು! ಆದರೆ, ತಾನು ಇವರನ್ನೆಲ್ಲ ನೋಡುತ್ತಿದ್ದೇನೆ. ಇವರ ಮಾತುಗಳನ್ನೂ ಕೇಳುತ್ತಿರುವೆನಲ್ಲ? ಈ ಸ್ಥಿತಿ ಎಂತಹದ್ದು? ತಾನೀಗ ಏನು ಮಾಡಬೇಕು?

ಆಗಲೇ ಎದುರಿಗೊಂದು ಒಂದು ದಿವ್ಯ ಬೆಳಕು ಗೋಚರಿಸಿತು. ಅದು ಪ್ರಕಾಶಮಾನವಾಗಿತ್ತು! ಪ್ರಶಾಂತವಾಗಿತ್ತು! ಅದೊಂದು ಬೆಳಕಿನ ಸುರಂಗದಂತಿತ್ತು! ಆಳವೇ ತಿಳಿಯದಷ್ಟು ಉದ್ದವಾಗಿತ್ತು, ಅನಂತವಾಗಿತ್ತು! ಆ ಬೆಳಕು ಸಮ್ಮೋಹಿನಿಯಂತಿತ್ತು! ಬಾ ಎಂದು ಆಹ್ವಾನಿಸುತ್ತಿತ್ತು! ದೇವರಾಜು ತಮ್ಮ ಇಚ್ಛೆಯೇ ಇಲ್ಲದೆ, ಸಮ್ಮೋಹಿನಿಗೆ ಒಳಗಾದಂತೆ ಆ ಬೆಳಕಿನ ಸುರಂಗದೆಡೆಗೆ ತೇಲುತ್ತಾ ಹೋದರು!


**ಎಸ್.ಜಿ. ಶಿವಶಂಕರ್**

ಬಿ.ಇ.ಎಂ.ಎಲ್ ಕಾರ್ಖಾನೆಯಲ್ಲಿ ಎರಡೂವರೆ ದಶಕಗಳಿಗಿಂತಲೂ ಹೆಚ್ಚುಕಾಲ ಎಂಜಿನಿಯರ್ ಆಗಿದ್ದ ಶಿವಶಂಕರ್, ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದ್ದಾರೆ. ಪ್ರಸ್ತುತ ಮೈಸೂರಿನಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ. ಬರವಣಿಗೆ, ನಾಟಕ ರಚನೆ, ನಿರ್ದೇಶನ, ನಟನೆ, ವಚನ ಸಾಹಿತ್ಯ ಮತ್ತು ವಿಜ್ಞಾನದಲ್ಲಿ ವಿಶೇಷ ಆಸಕ್ತಿ. ಅವರ ನಾಲ್ಕು ಕಾದಂಬರಿಗಳು, ತಲಾ ಎರಡು ಕತೆ, ಕವನ, ಹಾಸ್ಯಲೇಖನಗಳ ಸಂಕಲನಗಳು, 12 ನಾಟಕಗಳು ಪ್ರಕಟವಾಗಿವೆ.